# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.

## ಓ.ಎಸ್.ನಂ. 90/2013.

**ಪಿ ಡಬ್ಲ್ಯೂಃ 1**

**ದಿನಾಂಕಃ 05-11-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಜಿ.ಆರ್. ವಕೀಲರಿಂದಃ**

13. ನಾನು 8ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು 8ನೇ ತರಗತಿಯನ್ನು ಉತ್ತೀರ್ಣನಾಗಿಲ್ಲ. ನಾನು 1 ರಿಂದ 6ನೇ ತರಗತಿಯವರೆಗೆ ಶಿಡೆನೂರು ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. 7ನೇ ತರಗತಿಯನ್ನು ನಾನು ಹಂಸಭಾವಿಯಲ್ಲಿ ಓದಿದ್ದೇನೆ. 8ನೇ ತರಗತಿಯನ್ನು ನಾನು ಕಾಗಿನೆಲೆಯಲ್ಲಿ ಓದಿದ್ದೇನೆ. ನಾನು ಹಂಸಭಾವಿಯಲ್ಲಿ ಓದುವ ಕಾಲಕ್ಕೆ ಹಾಸ್ಟೇಲ್ ನಲ್ಲಿ ಇದ್ದೆ. ಕಾಗಿನೆಲೆಯಲ್ಲಿಯೂ ಸಹ ನಾನು ಓದುವ ಕಾಲಕ್ಕೆ ಕಾಗಿನೆಲೆಯಲ್ಲಿಯ ಹಾಸ್ಟೇಲ್ ನಲ್ಲಿಯೇ ಇದ್ದೆ. ಆಗ ನಾನು ಶಿಡೆನೂರಿಗೆ ಆಗಾಗ ಬಂದು ಹೋಗುತ್ತಿದ್ದೆ ಎಂದರೆ ಸರಿ. ನಾನು ನನ್ನ 8ನೇ ವಯಸ್ಸಿನಲ್ಲಿದ್ದಾಗ ಹೊಂಡದಲ್ಲಿ ಬಿದ್ದು ಸಾಯುವ ಸ್ಥಿತಿ ತಲುಪಿದ್ದೆ ಎಂದರೆ ನನಗೆ ನೆನಪಿಲ್ಲ. ನನಗೆ ಗೇಮಪ್ಪ ರವರ ಮನೆಯ ಚೆಕ್ ಬಂದಿ ಹೇಳಲು ಬರುವುದಿಲ್ಲ. ಸದರಿ ಗೇಮಪ್ಪರವರ ಮನೆ ಸೇವಾಲಾಲ ದೇವಸ್ಥಾನ ಬಳಿ ಇತ್ತು. ಆದರೆ ಸದರಿ ಮನೆ ಇರುವ ಓಣಿಗೆ ಹೆಸರು ಇರಲಿಲ್ಲ.

14. ದಾವಾ ಸ್ವತ್ತುಗಳಲ್ಲಿನ ಗೊಂಜಾಳ ಬೆಳೆಯನ್ನು ನಾವು ಯಾರ ಅಂಗಡಿಗೂ ಸಾಗಿಸುತ್ತಿರಲಿಲ್ಲ ಸ್ಥಳದಲ್ಲಿಯೇ ಮಾರಾಟ ಮಾಡುತ್ತಿದ್ದೆವು ಎನ್ನುತ್ತಾರೆ. ಸದರಿ

ಬೆಳೆಯನ್ನು ಖರೀದಿಸಲು ಬೇರೆ ಬೇರೆಯವರು ಬರುತ್ತಿದ್ದರಾ ಅಥವಾ ಒಬ್ಬರೆ ವ್ಯಾಪಾರಿ ಬರುತ್ತಿದ್ದರಾ ಎಂದರೆ ಸಾಕ್ಷಿ ದರ ಬಂದ ಹಾಗೆ ನೀಡುತ್ತಿದ್ದೆವು ಎನ್ನುತ್ತಾರೆ. ಸದರಿ ವ್ಯಾಪಾರಸ್ಥರು ಎಪಿಎಂಸಿ ಯಿಂದ ಲೈಸನ್ಸ ಹೊಂದಿರುತ್ತಾರೆ ಹಾಗೂ ಲೈಸನ್ಸ ಹೊಂದಿದವರೇ ಸದರಿ ಬೆಳೆಯನ್ನು ರೈತರಿಂದ ಖರೀದಿಸುತ್ತಾರೆ ಇಲ್ಲವಾದರೆ ಎಂಪಿಎಂಸಿ ಕಮೀಟಿಯವರು ಅವರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬೆಳೆಯ ತೂಕವನ್ನು ಬರೆದು ರಶೀದಿ ನೀಡುತ್ತಾರೆ ಎಂದರೆ ಸಾಕ್ಷಿ ಚಿಕ್ಕ ಚೀಟಿ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ಅವುಗಳ ಪೈಕಿ ಯಾವುದೇ ಚೀಟಿಯನ್ನು ನ್ಯಾಯಾಲಯಕ್ಕೆ ನಾನು ಹಾಜರು ಪಡಿಸಿಲ್ಲ. ನಾನು ದಾವಾ ಜಮೀನುಗಳಲ್ಲಿ ಯಾವುದೇ ಬೆಳೆಯನ್ನು ಯಾವತ್ತೂ ಬೆಳೆದಿಲ್ಲ ಹಾಗೂ ಅದನ್ನು ಯಾರೂ ಸಹ ಯಾವತ್ತೂ ಖರೀದಿಸಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ನಾನು ಬೆಳೆದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ದಾವಾ ಸ್ವತ್ತುಗಳನ್ನು ಇವತ್ತಿನ ಎಷ್ಟು ದಿನಗಳ ಹಿಂದೆ ನೋಡಿ ಬಂದಿರುತ್ತೀರಾ ಎಂದರೆ ಸಾಕ್ಷಿ 8 ದಿನಗಳ ಹಿಂದೆ ನೋಡಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತುಗಳಲ್ಲಿ ಈಗ ಮೆಕ್ಕೆಜೊಳ ಇದೆ. ದಾವಾ ಜಮೀನುಗಳ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಚೆಕ್ಕುಬಂದಿ ಎಂದರೆ ನನಗೆ ಅರ್ಥವಾಗುತ್ತದೆ.

16. ರೇವಲೆವ್ವ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜನ ತಮ್ಮ ಪೀರಪ್ಪ ರವರ ಮಕ್ಕಳ ಹೆಸರು ನನಗೆ ಗೊತ್ತಿದೆ. ಸದರಿಯವರ ಪೈಕಿ ನಾನು ದೇವಪ್ಪ, ಚಿಕ್ಕಪ್ಪ, ಈರಪ್ಪ, ದೇಮಪ್ಪ ಹಾಗೂ ಗೀರವ್ವರವರನ್ನು ನೋಡಿರುತ್ತೇನೆ. ಸದರಿಯವರ ಪೈಕಿ ದೇವಪ್ಪರವರ ಹೆಂಡತಿ ರೇವಲೆವ್ವ ಎಂದರೆ ಸರಿ. ಸದರಿ ಚಿಕ್ಕಪ್ಪ, ದೇಮಪ್ಪ, ದೇವಪ್ಪ ಹಾಗೂ ಈರಪ್ಪರವರ ಮದ್ಯೆ 2009 ನೇ ಸಾಲಿನಲ್ಲಿ ಒಂದು ದೊಡ್ಡ ಹೊಡೆದಾಟ ನಡೆದಿತ್ತು ಎಂದರೆ ನನಗೆ ಗೊತ್ತಿಲ್ಲ. 2009 ನೇ ಸಾಲಿನಲ್ಲಿ ನಾನು ಶಿಡೇನೂರು ಗ್ರಾಮದಲ್ಲಿದ್ದೆ. 2009 ನೇ ಸಾಲಿನಲ್ಲಿ ದೇಮಪ್ಪ ರವರ ಆಸ್ತಿಗಳಿಗೆ ಸಂಬಂಧಿಸಿದಂತೆ ಆದ ಹೊಡೆದಾಟದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿಯವರ ಮದ್ಯೆ ನನ್ನ ಅಜ್ಜನ ತಮ್ಮ ಪೀರಪ್ಪರವರ ಆಸ್ತಿಗಳಿಗೆ ಸಂಬಂಧಿಸಿದಂತೆ

ಜಗಳ ಆಗಿರುತ್ತದೆ. ಸದರಿ ಜಗಳ ಪೀರಪ್ಪನ ಆಸ್ತಿ ವಿಭಾಗಕ್ಕೆ ಸಂಬಂಧಿಸಿದಂತೆ ಬಂತಾ ಅಥವಾ ಯಾರ ಕಾರಣಕ್ಕೆ ಬಂತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಗಳಕ್ಕೆ ಸಂಬಂಧಿಸಿದಂತೆ ದೂರು ಪೋಲಿಸ್ ಠಾಣೆಯಲ್ಲಿ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪೀರಪ್ಪನ ಮಕ್ಕಳಾದ ದೇಮಪ್ಪನಿಗೆ ಗೇಮಪ್ಪ ಮೃತ್ಯುಪತ್ರದ ಮೂಲಕ ಆಸ್ತಿ ನೀಡಿದ್ದಾನೆ ಆದ್ದರಿಂದ ಸರ್ವೆ ನಂ.130/11 ನ್ನು ತನಗೆ ಬಿಟ್ಟುಕೊಡುವಂತೆ ದೇವಪ್ಪ ಹೇಳಿದ್ದರಿಂದ ಆತನ ಮತ್ತು ದೇಮಪ್ಪನ ಮದ್ಯೆ ಸದರಿ ಜಗಳ ಆಗಿತ್ತು ಎಂದರೆ ಸರಿಯಲ್ಲ. ಆದ್ದರಿಂದ ಸದರಿ ದೇವಪ್ಪ ತಾನು ಜೀವಂತ ಇರುವವರೆಗೂ ನಮ್ಮನ್ನು ಪುಸಲಾಯಿಸಿ ನಮ್ಮಿಂದ ದೇಮಪ್ಪನ ಹಾಗೂ ಆತನ ಮಕ್ಕಳ ವಿರುದ್ಧ ದಾವೆ ದಾಖಲಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ದೇವಪ್ಪ ತೀರಿಕೊಂಡ ನಂತರವೂ ಸಹ ಆತನ ಹೆಂಡತಿ ರೇವಲೆವ್ವ ನಮಗೆ ಸದರಿ ಈ ದಾವೆಗೆ ಹೋಗಿ ಬರಲು ಹಣ ನೀಡುತ್ತಿದ್ದಳು ಎಂದರೆ ಸರಿಯಲ್ಲ. ಈ ಎಲ್ಲದರ ಬಗ್ಗೆ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಯಾವತ್ತೂ ಸಹ ನನ್ನ ಕಬ್ಜೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ಎಲ್ಲ ಸಂಗತಿಗಳು ಗೊತ್ತಿದ್ದರೂ ಸಹ ಪ್ರತಿವಾದಿಯರ ಮೇಲಿನ ದ್ವೇಷದಿಂದ ದೇವಪ್ಪ ಹಾಗೂ ರೇವಲೆವ್ವ ರವರ ಮಾತು ಕೇಳಿ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ದಾಖಲಿಸಿದ್ದೆವು ಎಂದರೆ ಸರಿಯಲ್ಲ.

17. ದಾವಾ ಸ್ವತ್ತುಗಳನ್ನು ಯಾವಾಗ ಬಿಟ್ಟು ಕೊಡಿ ಎಂದು ಪ್ರತಿವಾದಿಯರನ್ನು ಕೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಪ್ರತಿವಾದಿಯರನ್ನು ಯಾವತ್ತೂ ಕೇಳಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ನಮಗೆ ಯಾವತ್ತೂ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ತೊಂದರೆ ನೀಡಿಲ್ಲ. ದಾವಾ ಸಲ್ಲಿಸಲು ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸರಿಯಾದ ಮಾರುಕಟ್ಟೆಯ ಬೆಲೆಯ ಮೇಲೆ ಕೋರ್ಟ್ ಫೀ ಯನ್ನು ತುಂಬಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾವು ಸಲ್ಲಲಿಸಿದ ದಾವೆ ಕಾನೂನು ಪ್ರಕಾರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.4 ರಿಂದ 8 ರವರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.